## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ

## ಸ್ಪೆಷಲ್ ಕೇಸ್ ನಂ. 3/2010

**ದೋ.ಸಾ. : 45 ಪ್ರಾ.ಸಾ. : 18**

ಸಾಕ್ಷಿಯ ಹೆಸರು : ರೇಣುಕಾ

ಗಂಡನ ಹೆಸರು : ನಾರಾಯಣ ಮಡಿವಾಳ

ವಯಸ್ಸು : 60 ವರ್ಷ

ಉದ್ಯೋಗ : ಗೃಹಿಣಿ

ವಾಸ : ಕಾನಗೋಡು , ಸಿದ್ದಾಪುರ

**ದಿನಾಂಕಃ 25-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಮದುವೆಯಾದಾಗಿನಿಂದ ಕಾನಗೋಡು ಗ್ರಾಮದಲ್ಲಿ ವಾಸ ಇದ್ದೇನೆ. ನನ್ನ ಮದುವೆಯಾಗಿ ಸುಮಾರು 30 ವರ್ಷ ಆಗಿದೆ . ನನ್ನ ಗ್ರಾಮದಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಶೌಚಾಲಯ ನಿರ್ಮಿಸಿಕೊಳ್ಳಲು ಸರ್ಕಾರ ಸಹಾಯ ಧನ ನೀಡಿದ ವಿಚಾರ ನನಗೆ ಗೊತ್ತಿಲ್ಲ. ನಮ್ಮ ಮನೆಯಲ್ಲಿ ಶೌಚಾಲಯ ಇರುವುದಿಲ್ಲ. ನಮ್ಮ ಗ್ರಾಮ ಪಂಚಾಯತಿಗೆ ಸದರಿ ಯೋಜನೆಯಡಿಯಲ್ಲಿ ರೂ. 20,00,000/- ಮಂಜೂರಾದ ವಿಚಾರ ನನಗೆ ಗೊತ್ತಿಲ್ಲ. ನಾನು ಫಲಾನುಭವಿ ಆಗಿ ಆ ಯೋಜನೆಯಡಿ ಆಯ್ಕೆಯಾಗಿದ್ದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ರೂ. 3,000/- ಆ ಯೋಜನೆಯಡಿಯಲ್ಲಿ ಸಹಾಯಧನ ಮಂಜೂರಾಗಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ನನಗೆ ರೂ. 3000/- ಸಹಾಯಧನ ಮಂಜೂರಾಗಿತ್ತು ಆದರೆ ಅದನ್ನು ನನಗೆ ಗ್ರಾಮ ಪಂಚಾಯತಿ ಕೊಟ್ಟಿಲ್ಲ ಎಂದು ತನಿಖಾಧಿಕಾರಿಗೆ ನಾನು ಹೇಳಿಕೆ ಕೊಟ್ಟಿಲ್ಲ. ನ್ಯಾಯಾಲಯದಲ್ಲಿ ಇರುವ ಆರೋಪಿ ನನಗೆ ಪರಿಚಯ ಇದೆ . ಆರೋಪಿ ನಮ್ಮ ಗ್ರಾಮ ಪಂಚಾಯತಿಯಲ್ಲಿ ಅಧ್ಯಕ್ಷ ಆಗಿದ್ದಾನಾ ಎಂದು ನನಗೆ ಗೊತ್ತಿಲ್ಲ ಕಾರಣ ನನಗೆ ಅಕ್ಷರ ಜ್ಞಾನ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ನಾನು ಫಲಾನುಭವಿಯಾಗಿ ಮೇಲ್ಕಂಡ ಯೋಜನೆಯಲ್ಲಿ ಆಯ್ಕೆಯಾಗಿದ್ದೆ ಮತ್ತು ನನಗೆ ರೂ. 3000/– ಸಹಾಯಧನ ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ . ಆ ಸಹಾಯಧನ ಹಣವನ್ನು ನನಗೆ ಪಾವತಿ ಮಾಡಿಲ್ಲ ಎಂದು ಪೊಲೀಸ್ ನವರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ. 54 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರು**

ಏನೂ ಇಲ್ಲ ಎಂದು ಹೇಳಿದ್ದಾರೆ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ